Annexture No: 6

ಸೋಲಾರ್ ಅಂಚೆಯಲ್ಲಿ ಸ್ವೀಕೃತಿಯೊಂದಿಗೆ

ಲೋಕೋಪಯೋಗಿ ಇಲಾಖೆ
ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಚೇರಿ
ಲೋಕೋಪಯೋಗಿ ಇಲಾಖೆ, ನಂ.3ನೇ ಉಪವಿಭಾಗ, ಕಾರ್ಕಳ.
ಕಚೇರಿ ದೂರವಾಣಿ ಸಂಖ್ಯೆ : 08258-230202
E-mail : aeepwdkkl@gmail.com

AEE 21/9/20

ನಂ:ಲೋಇಕಾ/ಜಿಮುರ/11ಕೆವಿ/2020-21/ಜೆಇ/ 529-530/ದಿನಾಂಕ: 18/09/2020

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.),
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಮೆಸ್ಕಾಂ ನಿಯಮಿತ, ಹೆಬ್ರಿ.

ಮಾನ್ಯರೆ,

ವಿಷಯ : ಫಾರೆಸ್ಟ್ ಕ್ಲಿಯರೆನ್ಸ್ ಬಗ್ಗೆ.
ಉಲ್ಲೇಖ : ತಮ್ಮ ಕಚೇರಿ ಪತ್ರ ಸಂ:ಸಕಾನಿಇಂ(ವಿ)/ಹೆಬ್ರಿ/20-21/1482/ದಿ:15.09.2020.

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹೆಬ್ರಿ 33/11 ಕೆ.ವಿ. ಎಂ.ಯು.ಎಸ್.ಎಸ್.ನಿಂದ ಮುನಿಯಾಲು-ವರಂಗ ಭಾಗದ ವಿದ್ಯುತ್ ಗ್ರಾಹಕರಿಗೆ ಹೊಸ 11 ಕೆ.ವಿ. express ಫೀಡರ್ ಅನ್ನು ಹೆಬ್ರಿ ಮುದ್ರಾಡಿ ರಸ್ತೆಯ ಜರುವತ್ತು ಮುಖಾಂತರ ರಚನೆ ಮಾಡುತ್ತಿದ್ದು ಸದರಿ ಕಾಮಗಾರಿಯು ಗಿಲ್ಲಾಳಿಯಿಂದ ಜರುವತ್ತುವಿನ ವರೆಗೆ ಫಾರೆಸ್ಟ್ ಕ್ಲಿಯರೆನ್ಸ್ ಪಡೆಯಲು ಈ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತೀರಿ.

ಸದರಿ ಸ್ಥಳವನ್ನು ಪರಿಶೀಲಿಸಿದಾಗ ಈ ರಸ್ತೆಯು ಈ ಇಲಾಖಾ ವ್ಯಾಪ್ತಿಯ ಮುದ್ರಾಡಿ-ಹೆಬ್ರಿ ಜಿಲ್ಲಾಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು 5.50ಮೀ. ಅಗಲದ ಡಾಂಬಾರು ರಸ್ತೆಯಾಗಿದ್ದು ರಸ್ತೆಯ ಎರಡೂ ಬದಿಯಲ್ಲಿ ರಸ್ತೆಯ ಮಧ್ಯಭಾಗದಿಂದ 25.00ಮೀಟರ್ ದೂರದ ವರೆಗೂ ರಸ್ತೆ ಮಾರ್ಜಿನ್ ಸ್ಥಳವಾಗಿರುತ್ತದೆ. ಸದರಿ 11 ಕೆ.ವಿ. express ಫೀಡರ್ ಅನ್ನು ಅಳವಡಿಸಲು ಈ ಕೆಳಗಿನ ಶರತ್ತಿನೊಂದಿಗೆ ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

1. ಸದರಿ 11 ಕೆ.ವಿ. express ಫೀಡರ್ ಅನ್ನು ಅಳವಡಿಸುವ ಕಂಬವನ್ನು ರಸ್ತೆಯ ಮಧ್ಯಭಾಗದಿಂದ ಕನಿಷ್ಠ 10.00ಮೀಟರ್ ದೂರದಲ್ಲಿ ಅಳವಡಿಸತಕ್ಕದ್ದು.
2. ರಸ್ತೆ ಅಗಲೀಕರಣ ಮಾಡುವಾಗ ತಾವು ಅಳವಡಿಸಿದ 11 ಕೆ.ವಿ. express ಫೀಡರ್‌ನ ಕಂಬಗಳನ್ನು ತಮ್ಮ ಸ್ವಂತ ಖರ್ಚಿನಿಂದ ತೆರವುಗೊಳಿಸತಕ್ಕದ್ದು/ಸ್ಥಳಾಂತರಿಸತಕ್ಕದ್ದು.
3. ಸದರಿ 11 ಕೆ.ವಿ. express ಫೀಡರ್ ಅನ್ನು ಅಳವಡಿಸುವಾಗ ಇತರ ಯಾವುದೇ ಕೇಬಲ್, ಪೈಪ್‌ಲೈನ್‌ಗಳಿಗೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುವುದು.
4. ಸದರಿ ಕಾಮಗಾರಿಯನ್ನು ನಡೆಸುವಾಗ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಕ್ರಮಕೈಗೊಳ್ಳತಕ್ಕದ್ದು.
5. ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ನೀಡಿದ ಪರವಾನಿಗೆಯನ್ನು ಯಾವುದೇ ಸೂಚನೆ ನೀಡದೆ ರದ್ದುಪಡಿಸಲಾಗುವುದು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ, ನಂ.3 ಉಪವಿಭಾಗ, ಕಾರ್ಕಳ.